**CCE PF**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 04. 04. 2018 ] ಸಂಕೇತ ಸಂಖ್ಯೆ : **62-K**

Date : 04. 04. 2018 ] CODE NO. : **62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ / Private Fresh)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಶಿಶುನಾಳ ಶರೀಫರು ಸ್ವಪ್ರಯತ್ನದಿಂದ ಏನನ್ನು ಕಲಿತರು ?<br>***ಉತ್ತರ :***<br>ಶಿಶುನಾಳ ಶರೀಫರು ಸ್ವಪ್ರಯತ್ನದಿಂದ ಉರ್ದು ಹಾಗೂ ಮೋಡಿಗಳನ್ನು ಕಲಿತರು. | |
| 2. | ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?<br>***ಉತ್ತರ :***<br>'ಮಾಡು ಇಲ್ಲವೆ ಮಡಿ' ಎಂಬುದು ಗಾಂಧೀಜಿಯವರು ಕೊಟ್ಟ ಮಂತ್ರ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ರಾಮ್‌ಸಿಂಗನು ಸಿಪಾಯಿಗಳಿಗೆ ಯಾವ ಮಾತನ್ನು ಸೆರಗಿಗೆ ಗಂಟು ಹಾಕಿಕೊಳ್ಳುವಂತೆ ತಿಳಿಸಿದನು ?<br>***ಉತ್ತರ :***<br>ರಾಮ್‌ಸಿಂಗನು ಸಿಪಾಯಿಗಳಿಗೆ ಜನರೊಪ್ಪದೆ, ಬ್ರಿಟಿಷರ ಆಟ ಇನ್ನು ಭಾರತದಲ್ಲಿ ನಡೆಯಲಾರದು. ಇದನ್ನು ಸೆರಗಿಗೆ ಗಂಟು ಹಾಕಿಕೊಳ್ಳುವಂತೆ ತಿಳಿಸಿದನು. | |
| 4. | ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಏನು ಮಾಡಿದನು ?<br>***ಉತ್ತರ :***<br>ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯು ಗಾಳಿಯಲ್ಲಿ ಮೇಲೆ ಗುಂಡು ಹಾರಿಸಿದನು. | |
| 5. | ಕೆಳದಿಯ ಚೆನ್ನಮ್ಮ ಯಾರಿಗೆ ಆಶ್ರಯವನ್ನು ನೀಡಿದಳು ?<br>***ಉತ್ತರ :***<br>ಕೆಳದಿಯ ಚೆನ್ನಮ್ಮ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವನ್ನು ನೀಡಿದಳು. | |
| 6. | 'ಸಂಧ್ಯಾರಾಗ' ಪುಸ್ತಕವನ್ನು ಬೀಚಿಯವರು ಏಕೆ ಓದಿದರು ?<br>***ಉತ್ತರ :***<br>ಬೀಚಿಯವರ ಹೆಂಡತಿ 'ಸಂಧ್ಯಾರಾಗ' ಪುಸ್ತಕವನ್ನು ಓದುವಂತೆ ಒತ್ತಾಯಪಡಿಸಿ ದುಂಬಾಲು ಬಿದ್ದಿದ್ದರಿಂದ ಬೀಚಿ ಆ ಪುಸ್ತಕವನ್ನು ಓದಿದರು. | |
| 7. | ಬೀಚಿಯವರನ್ನು ಮಂತ್ರಮುಗ್ಧಗೊಳಿಸಿದ ಕೃತಿ ಯಾವುದು ?<br>***ಉತ್ತರ :***<br>ಜಿ.ಪಿ. ರಾಜರತ್ನಂರವರ 'ರತ್ನನ ಪದಗಳು' ಎಂಬ ಕೃತಿಯು ಬೀಚಿಯವರನ್ನು ಮಂತ್ರಮುಗ್ಧಗೊಳಿಸಿತು. | |
| 8. | ಸತೀಶ ಕುಲಕರ್ಣಿಯವರು ಕಟ್ಟಬಯಸಿದ ಮನುಕುಲವು ಮೆಚ್ಚುವಂಥದ್ದು ಏಕೆ ?<br>***ಉತ್ತರ :***<br>ಸತೀಶ ಕುಲಕರ್ಣಿಯವರು ಕುಲವೆನ್ನದ ಮನುಕುಲವನ್ನು ಕಟ್ಟಬಯಸಿದಾರೆ. ಈ ಅಂಶವು ಮೆಚ್ಚುವಂಥದ್ದು. | |
| 9. | 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದೇ ಎಂದು ಹೇಳಿದ್ದಾರೆ ?<br>***ಉತ್ತರ :***<br>'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ನಾವು, ನೀವು, ಅವರು, ಇವರು ಒಂದೇ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಭೀತ ವಿಸ್ಮಿತರಾದ ಕವಿ ಸಿ.ಪಿ.ಕೆ.ಯವರು ಯಾರ ಹಾಗೆ ತತ್ತರಿಸಿದರು ?<br>*ಉತ್ತರ :*<br>ಭೀತ ವಿಸ್ಮಿತರಾದ ಕವಿ ಸಿ.ಪಿ.ಕೆ.ಯವರು ವಿಶ್ವರೂಪವನ್ನು ನೋಡಿದ ಪಾರ್ಥನಂತೆ ತತ್ತರಿಸಿದರು. | |
| 11. | ಯಾವುದು ಸ್ವರ್ಗವೆಂದು ಬಸವಣ್ಣನವರು ಹೇಳಿದ್ದಾರೆ ?<br>*ಉತ್ತರ :*<br>ಆಚಾರವೇ ಸ್ವರ್ಗವೆಂದು ಬಸವಣ್ಣನವರು ಹೇಳಿದ್ದಾರೆ. | |
| 12. | ಪುರಂದರದಾಸರು ಯಾವುದನ್ನು ಉದರ ವೈರಾಗ್ಯವೆಂದಿದ್ದಾರೆ ?<br>*ಉತ್ತರ :*<br>ಪುರಂದರದಾಸರು ಭಕ್ತನ ಡಾಂಭಿಕತನವನ್ನು ಉದರ ವೈರಾಗ್ಯವೆಂದಿದ್ದಾರೆ. | |
| 13. | ಆಚಾರವಂತ ಎನ್ನುವ ಹೆಸರಿಗೆ ಯಾರು ಅರ್ಹನಲ್ಲವೆಂದು ಕವಿ ಸೋಮನಾಥ ಹೇಳಿದ್ದಾರೆ ?<br>*ಉತ್ತರ :*<br>ಶಿವನನ್ನು ಸ್ಮರಿಸದಿರುವವನು ಆಚಾರವಂತನೆಂಬ ಹೆಸರಿಗೆ ಅರ್ಹನಲ್ಲವೆಂದು ಕವಿ ಸೋಮನಾಥನು ಹೇಳಿದ್ದಾನೆ. | |
| 14. | ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥ ಹೇಳಿದ್ದಾರೆ ?<br>*ಉತ್ತರ :*<br>ತನ್ನ ಕೈಯಿಂದ ದಂಡ ತೆರಬಲ್ಲ ಸಾಮರ್ಥ್ಯವಿದ್ದಾಗ ಬೇರೆಯವರ ಸಾಲಕ್ಕೆ ಹೊಣೆಯಾಗಬೇಕಾಗುತ್ತದೆ ಎಂದು ಕವಿ ಸೋಮನಾಥ ಹೇಳಿದ್ದಾರೆ. | |
| 15. | ಧರ್ಮಪದನಿಗೆ ವಿಷವುಣಿಸಲು ಪ್ರಯತ್ನಿಸಿದ್ದೇಕೆ ?<br>*ಉತ್ತರ :*<br>ಇಷ್ಟು ಚಿಕ್ಕ ವಯಸ್ಸಿನಲ್ಲಿ ಎಂಥ ಪ್ರತಿಭೆ ಇವನಿಗೆ, ಅವನ ಪ್ರತಿಭೆಯ ಮುಂದೆ ತಮ್ಮ ಸಾಧನೆ ಸಣ್ಣದಾಗಬಾರದೆಂದು ಧರ್ಮಪದನಿಗೆ ವಿಷವುಣಿಸಲು ಪ್ರಯತ್ನಿಸಿದರು. | |
| 16. | ಧರ್ಮಪದನು ವಿಶುವಿನ ಬಳಿಗೆ ಬಂದದ್ದೇಕೆ ?<br>*ಉತ್ತರ :*<br>ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ವಿಶುವಿನ ಬಳಿಗೆ ಬಂದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :** (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಗೊರೂರರನ್ನು ಮಿನಿ ಪೊಲೀಸ್ ನಗರದ ಪೊಲೀಸರು ಹೇಗೆ ಉಪಚರಿಸಿದರು ? | |
| | ***ಉತ್ತರ :*** | |
| | ಗೊರೂರರಿಗೆ ಅಮೇರಿಕಾದ ಮಿನಿಪೊಲೀಸ್ ನಗರದಲ್ಲಿ ತಮ್ಮ ಮಿತ್ರ ಸಿಗದಿದ್ದಾಗ ದಾರಿ ತೋಚದಂತಾಯಿತು. ಆಗ ಅವರು ಟ್ರಾಫಿಕ್ ಪೊಲೀಸ್‌ನವನ ಕಣ್ಣಿಗೆ ಬಿದ್ದಾಗ ಆತ ಅವರಿಂದ ಸಮಸ್ಯೆಯನ್ನು ತಿಳಿದುಕೊಂಡು ತನ್ನ ಮನೆಗೆ ಅವರನ್ನು ಕರೆದುಕೊಂಡು ಹೋಗುತ್ತಾನೆ. ಅಲ್ಲಿ ರಾತ್ರಿ ಊಟಕ್ಕೆ ಹಾಲು, ಹಣ್ಣು, ಬ್ರೆಡ್, ಬಿಸ್ಕತ್ತುಗಳನ್ನು ನೀಡುವುದಲ್ಲದೆ ಅವರಿಗೆ ಮಲಗಿಕೊಳ್ಳಲು ಲಾಕಪ್ಪಿನಲ್ಲಿ ವ್ಯವಸ್ಥೆ ಮಾಡಿಕೊಡುವುದರೊಂದಿಗೆ ಉಪಚರಿಸುತ್ತಾನೆ. | |
| 18. | ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದೇಕೆ ? | |
| | ***ಉತ್ತರ :*** | |
| | ಗೊರೂರರಿಗೆ ದಾರಿತೋಚದೆ ಅಲೆದಾಡುತ್ತಿದ್ದುದನ್ನು ಗಮನಿಸಿದ ಪೊಲೀಸಿನವನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಅವರನ್ನು ಉಪಚರಿಸುತ್ತಾ, ತನ್ನ ಮನೆಯಲ್ಲಿರುವ ಹಾಸಿಗೆ ಉಪಯೋಗಿಸದೆ ಧೂಳು ತುಂಬಿ ಮಲಗಲು ಸರಿಯಾದ ವ್ಯವಸ್ಥೆ ಇರಲಿಲ್ಲವೆಂದು ಮನೆಯ ಮಗ್ಗುಲಲ್ಲೆ ತನ್ನ ವಶದಲ್ಲಿಯೇ ಇದ. ಲಾಕಪ್ ಗಾಳಿ, ಬೆಳಕು ಸ್ವಚ್ಛ ಹಾಸಿಗೆ, ವಾರಕ್ಕೆರಡು ಸಲ ಕ್ರಿಮಿನಾಶಕ ಸಿಂಪರಣೆಯಿಂದ ಕೂಡಿರುವುದರಿಂದ ಸೊಗಸಾಗಿ ನಿದ್ರೆ ಬರುವುದೆಂದು ಅವರನ್ನು ಲಾಕಪ್ಪಿನಲ್ಲಿ ಮಲಗುವಂತೆ ತಿಳಿಸುತ್ತಾನೆ. | |
| 19. | ಕೊಡಗಿನ ಗೌರಮ್ಮನವರು ಯಾವ ಯಾವ ವಿಚಾರಗಳ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದರು ? | |
| | ***ಉತ್ತರ :*** | |
| | ಕೊಡಗಿನ ಗೌರಮ್ಮನವರು ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ, ಮಾನವೀಯ ವಿಚಾರಗಳು. ಮಹಿಳಾ ಲೋಕದ ಕನಸುಗಳು, ಆದರ್ಶಗಳು, ಮಹಿಳೆಯರ ಸಂಕೋಲೆ, ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವವರ ವಿಚಾರಗಳನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸುವ ಆಸಕ್ತಿಯನ್ನು ಹೊಂದಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಶಿಶುನಾಳ ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡದ್ದು ಹೇಗೆ ?<br>*ಉತ್ತರ :*<br>ಶರೀಫರಿಗೆ ತಮ್ಮ ಹೆಂಡತಿ ಮತ್ತು ಮಗಳ ಸಾವಿನಿಂದ ಸಹಿಸಲಾಗದ ಆಘಾತವಾಗಿತ್ತು. ಇದರಿಂದ ಧೃತಿಗೆಡದ ಅವರು ಸಾಧು ಪುರುಷ ಸಹವಾಸದಿಂದ ದೇವರಧ್ಯಾನ, ಉಪಾಸನೆಗಳಲ್ಲಿ ತೊಡಗುವುದರಿಂದ ಆಧ್ಯಾತ್ಮ, ಸುಭೋದ ಧರ್ಮ, ನೀತಿಮಾತುಗಳನ್ನು ಬೋಧಿಸುವ ಹವ್ಯಾಸಗಳಿಂದ ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡರು. | |
| 21. | ರಾಮ್‌ಸಿಂಗ್‌ನ ತಾಯಿ ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.<br>*ಉತ್ತರ :*<br>ರಾಮ್‌ಸಿಂಗನ ತಾಯಿ ತುಳಜಾಬಾಯಿಯು ತನ್ನ ಮಗನನ್ನು ಬಲಿಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯಮಾಡಿ ಒಂದು ವರ್ಷದ ಹಿಂದಷ್ಟೇ ತನ್ನ ಪತಿಗತಿಸಿದ್ದರೂ ಲೆಕ್ಕಿಸದ ಆಕೆ ಆಶೀರ್ವದಿಸಿ ತನ್ನ ಮಗನನ್ನು ಕಳುಹಿಸುತ್ತಾಳೆ. ಹಾಗೆಯೇ ತನ್ನ ಮಗನ ಬಲಿಯಾದಾಗ ಧ್ವಜವನ್ನು ಹಿಡಿದು ತಾನೂ ತನ್ನ ಪ್ರಾಣವನ್ನು ದೇಶಕ್ಕಾಗಿ ತ್ಯಜಿಸಲು ಸಿದ್ಧಳಿರುವುದಾಗಿ ತಿಳಿಸುತ್ತಾಳೆ. ಇದರಿಂದ ಅವಳ ತ್ಯಾಗ ಮತ್ತು ದೇಶಭಕ್ತಿ ವ್ಯಕ್ತವಾಗುತ್ತದೆ. | |
| 22. | ಕಿತ್ತೂರು ರಾಣಿ ಚೆನ್ನಮ್ಮ ಸೆರೆಯಾದುದೇಕೆ ?<br>*ಉತ್ತರ :*<br>ಕಿತ್ತೂರಿನ ರಾಣಿ ಚೆನ್ನಮ್ಮಳು ಬಲಾಢ್ಯ ಬ್ರಿಟಿಷರನ್ನು ಸೋಲಿಸಿ, ಸೆರೆಯಾಳುಗಳನ್ನು ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಾಣುತ್ತಿದ್ದರೂ, ಹಿತಶತ್ರುಗಳೊಂದಿಗೆ ಸೇರಿ ಪಿತೂರಿ ನಡೆಸಿ ಮದ್ದಿನಲ್ಲಿ ಸಗಣಿ ಸೇರಿಸಿ ಚೆನ್ನಮ್ಮಳ ತೋಪು ಹಾರದಂತೆ ಮಾಡಿ ಮೋಸದಿಂದ ಆಕೆಯನ್ನು ಸೆರೆಹಿಡಿಯುತ್ತಾರೆ. | |
| 23. | ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ ಏಕೆ ?<br>*ಉತ್ತರ :*<br>ಬೀಚಿಯವರು ಹೈಸ್ಕೂಲಿನಲ್ಲಿದ್ದಾಗ ಪಠ್ಯಪುಸ್ತಕಗಳಲ್ಲದೆ ಬೇರೆತರ ಓದುವುದು ಅಕ್ಷಮ್ಯ ಅಪರಾಧ. ಸಮಯ ಹಾಳು ಎಂಬುದಾಗಿತ್ತು. ಗ್ರಂಥಾಲಯವಿದ್ದರೂ ಕಪಾಟುಗಳಲ್ಲಿನ ಪುಸ್ತಕಗಳು ಸರಸ್ವತಿಯ ಪೂಜೆಯಂದು ಪೂಜೆಯನ್ನು ಪಡೆದು, ತಮಗೆ ದರ್ಶನವಾಗುತ್ತಿತ್ತೆಂದೂ, ಅವು ಕಪಾಟುಗಳಲ್ಲಿಯೇ ಇದ್ದುದರಿಂದ ಅವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲವೆಂದು ಬೀಚಿಯವರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | 'ಕಟ್ಟತೇವ ನಾವು' ಕವಿತೆಯು ಸಮಾಜದಲ್ಲಿನ ಕ್ರಾಂತಿಕಾರಿಗಳ ಕನಸಿನ ಹಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ ?<br>***ಉತ್ತರ :***<br>ಕ್ರಾಂತಿಕಾರಿಗಳು ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು, ಜನರ ಬದುಕಿನಲ್ಲಿ ಭರವಸೆಗಳನ್ನು ಮೂಡಿಸಲು ಕರೆ ನೀಡುತ್ತಾ, ಭೀತಿಯಿಲ್ಲದ, ಜಾತಿಯಿಲ್ಲದ, ಬದುಕಿನ ಗೋಳಿಲ್ಲದ, ಗುಂಡಿನ ಸದ್ದಿಲ್ಲದ ನಾಡನ್ನು ಕಟ್ಟುತ್ತಾ, ನೂರು ಮನಸ್ಸಿನ ಕನಸುಗಳನ್ನು ನನಸು ಮಾಡುವ ಹಾಡನ್ನು ಕಟ್ಟುತ್ತೇವೆಂದಿದ್ದಾರೆ. ಕ್ರಾಂತಿ ಕುಂಡವನ್ನು ಹೊತ್ತು ಮುಳ್ಳುತುಳಿಯುತ್ತಾ ತಮ್ಮ ಪಾಲಿನ ಹಾಡನ್ನು ಬರೆಯುತ್ತಾ ಹೊಸನಾಡನ್ನು ಕಟ್ಟಬಯಸಿದ್ದಾರೆ. | |
| 25. | ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ಕವಿ ಕೆ.ಎಸ್. ನಿಸಾರ್ ಅಹಮದ್‌ರವರು ಹೇಗೆ ನಿರೂಪಿಸಿದ್ದಾರೆ ?<br>***ಉತ್ತರ :***<br>ಕವಿ ನಿಸಾರ್ ಅಹಮದ್‌ರವರು ವಿಶಾಲವಾದ ಭಾರತದೇಶದಲ್ಲಿ ಕರ್ನಾಟಕ, ವಂಗ (ಬಂಗಾಳ), ಆಂಧ್ರ ಪ್ರದೇಶ ಮುಂತಾದ ಹಲವು ರಾಜ್ಯಗಳಲ್ಲಿ ನೆಲೆಸಿರುವವರೆಲ್ಲರೂ ಭಾರತೀಯರೇ. ರಾಜ್ಯ, ಭಾಷೆ ಬೇರೆ ಬೇರೆಯಾದರೂ ಉಸಿರಾಡುವ ಗಾಳಿ ಒಂದೇ. ಈ ಗಾಳಿ ಪೂರ್ವೋತ್ತರ, ಪಶ್ಚಿಮ, ದಕ್ಷಿಣ ದಿಕ್ಕುಗಳೆಲ್ಲೆಡೆಗಳಲ್ಲಿಯೂ ಬೀಸುತ್ತದೆ. ಆದ್ದರಿಂದ ನಮ್ಮೆಲ್ಲರಲ್ಲೂ ಒಂದೇ ಎಂಬ ಏಕತಾಭಾವ ಮೂಡುವಂತೆ ಈ ಭೌಗೋಳಿಕ ಅಂಶಗಳು ಭಾರತೀಯರನ್ನು ಒಂದುಗೂಡಿಸಿವೆ ಎಂದು ಕವಿ ನಿರೂಪಿಸಿದ್ದಾರೆ. | |
| 26. | ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ಕವಿ ಕೆ.ಎಸ್. ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?<br>***ಉತ್ತರ :***<br>ಕವಿ ನಿಸಾರ್ ಅಹಮದ್‌ರವರು ಬಾಣ, ಬಿರುಸು, ಕುಂಡ ಮತ್ತು ಹಣತೆಗಳು ಆಕಾರದಲ್ಲಿ ಬೇರೆ ಬೇರೆಯಾಗಿದ್ದರೂ ಅವುಗಳಲ್ಲಿ ಅಡಗಿರುವ ಬೆಳಕಿನ ಸತ್ವವೊಂದೇ ಅದರಲ್ಲಿ ಭಿನ್ನತೆಯೆಂಬುದಿಲ್ಲ. ಹಾಗೆಯೇ ಕವಿಗಳು ರಚಿಸಿರುವ ಕಾವ್ಯ ಪ್ರಕಾರಗಳಾದ ಕಂದ, ವೃತ್ತ, ತ್ರಿಪದಿ, ವಚನಗಳು ರಚನಾ ಕ್ರಮದಲ್ಲಿ ಬೇರೆ ಬೇರೆಯಾದರೂ ಅಡಗಿರುವ ರಸ ಕವಿತ್ವದ ಅಂಶಗಳು ಒಂದೇ ಆಗಿರುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಗ್ರಂಥಾಲಯವನ್ನು ಹೊಕ್ಕಾಗ ಕವಿ ಸಿ.ಪಿ.ಕೆ. ಅವರಿಗಾದ ಅನುಭವವನ್ನು ತಿಳಿಸಿ.<br>*ಉತ್ತರ :*<br>ಕವಿ ಸಿ.ಪಿ.ಕೆ.ರವರು ಗ್ರಂಥಾಲಯಕ್ಕೆ ಹೋದಾಗ ಅವರ ಕಣ್ಣಿನ ದೃಷ್ಟಿ ಹರಿದ ಕಡೆಯಲ್ಲೆಲ್ಲಾ ಗ್ರಂಥಗಳು ಪರ್ವತಗಳ ಸಾಲಿನಂತೆ ಕಂಡು ಅಚ್ಚರಿಯನ್ನುಂಟು ಮಾಡುತ್ತವೆ. ಅಪಾರವಾದ ಜ್ಞಾನರಾಶಿಯ ಮುಂದೆ ನಿಂತಾಗ ತನ್ನಲ್ಲಿರುವ ಅಹಂಕಾರವು ಕ್ಷಣಮಾತ್ರದಲ್ಲಿ ಅಡಗಿಹೋಗುವುದು. ಮತ್ತು ಗ್ರಂಥಾಲಯವು ಹಿರಿಬಾಳುಗಳ ಮೇಳ ಹಾಗೂ ಪಳೆಯುಳಿಕೆಗಳಂತೆ ಕಂಡುಬರುತ್ತದೆ. | |
| 28. | ರೈತನು ಮಳೆರಾಯನಲ್ಲಿ ದನಕರುಗಳು ಹೇಗಾಗಿವೆಯೆಂದು ನಿವೇದಿಸಿಕೊಂಡಿದ್ದಾನೆ ?<br>*ಉತ್ತರ :*<br>ರೈತನು ಈ ಭೂಮಿಯನ್ನು ರಕ್ಷಿಸುವವರಿಲ್ಲದೆ, ಮಳೆ ಇಲ್ಲದೆ ಸೊರಗಿದೆ. ಮೇವಿಲ್ಲದೆ ದನಕರುಗಳು ಸೊರಗಿ ಹೋಗಿವೆ. ಆದ್ದರಿಂದ ಮಳೆದೇವರೇ ನೀನು ಬಂದು ನಮ್ಮೆಲ್ಲರನ್ನು ರಕ್ಷಿಸು ಮತ್ತು ಕರುಣೆದೋರೆಂದು ಮಳೆರಾಯನಲ್ಲಿ ನಿವೇದಿಸಿಕೊಳ್ಳುತ್ತಾನೆ. | |
| 29. | ಮೋಡಗಳನ್ನು ಕಂಡ ರೈತರ ಸಂಭ್ರಮವನ್ನು ಜನಪದರು ವರ್ಣಿಸಿರುವುದು ಮೆಚ್ಚುವಂಥದ್ದೇಕೆ ?<br>*ಉತ್ತರ :*<br>ಮೋಡಗಳನ್ನು ಕಂಡಾಗ ರೈತನು ಮೂಡಣ ದಿಕ್ಕಿನಲ್ಲಿ ಮೂಡಿರುವ ಕಾರ್ಮೋಡದ ಅಂದವನ್ನು ನೋಡಿ ಅದು ಪೂರ್ವದ ಗೋಡೆಗೆ ಕಪ್ಪು ಬಣ್ಣವನ್ನೇ ಬಳಿದಂತೆ ಕಂಡುಬರುತ್ತದೆ ಮುಗಿಲಿನಿಂದ ಬೀಳುವ ಮಳೆಹನಿಗಳು ಭೋರ್ಗರೆತ ಉಂಟುಮಾಡುವುದನ್ನು ಕೇಳಿ ರೈತರು ಸಂತೋಷಪಡುತ್ತಾರೆ ಎಂಬುದನ್ನು ಜನಪದಗೀತೆಯಲ್ಲಿ ವರ್ಣಿಸಿರುವ ರೀತಿ ಮೆಚ್ಚುವಂಥದ್ದು. | |
| 30. | ಈರಪ್ಪ ಎಂ. ಕಂಬಳಿಯವರನ್ನು ಕಂಡ ಸಹ ಪ್ರಯಾಣಿಕರು ಪಕಪಕನೆ ನಗಲು ಕಾರಣವೇನು ?<br>*ಉತ್ತರ :*<br>ಈರಪ್ಪ ಕಂಬಳಿಯವರು ಬಸ್ಸಿನ ಟಾಪಿನ ಮೇಲೆ ಕುಳಿತು ಪ್ರಯಾಣಿಸುವಾಗ ಇದ್ದಕ್ಕಿದ್ದಂತೆ ರಸ್ತೆಗೆ ಅಡ್ಡಲಾಗಿ ಎಳೆದ ವಿದ್ಯುತ್‌ತಂತಿಗಳು ತಲೆಯ ಹತ್ತಿರದಲ್ಲೇ ಹಾದು ಹೋದಾಗ ಮೈಮರೆತು ಕುಳಿತಿದ್ದವರಿಗೆ ಸಾವೇ ಭುಜಸವರಿದಂತಾಗಿ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾದಾಗ ದಿಗ್ಗನೇ ಅವರು ಟಾಪಿಗೆ ಒರಗಿದ್ದನ್ನು ನೋಡಿದ ಸಹಪ್ರಯಾಣಿಕರು ಇನ್ನೂ ಮುಂದೆ ತಲೆ ಬಗ್ಗಿಸಲೇಬೇಕಾದ ಜಾಗವಿರುವುದೆಂದೂ, ಅದನ್ನು ತಾವು ಹೇಳುತ್ತೇವೆಂದು ಪಕಪಕನೆ ನಕ್ಕರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ." | |
| | ***ಉತ್ತರ :*** | |
| | ಪ್ರಸ್ತುತ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ವಿರಚಿತ 'ಅಮೆರಿಕಾದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆರಿಸಿದ 'ಲಾಕಪ್ಪಿನಲ್ಲಿ ಒಂದು ರಾತ್ರಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ. | |
| | ಗೊರೂರರು ಟ್ರಾಫಿಕ್ ಪೊಲೀಸಿನವನ ಕಣ್ಣಿಗೆ ಬಿದ್ದಾಗ ಅವನು ಗೊರೂರರನ್ನು ಕರೆದುಕೊಂಡು ತನ್ನ ಮನೆಗೆ ಹೋಗುತ್ತಾನೆ. ಅವರನ್ನು ಉಪಚರಿಸುತ್ತಾ ತನ್ನ ಮನೆಯ ಮಗ್ಗುಲಲ್ಲಿ ಇರುವ ಲಾಕಪ್ಪಿನಲ್ಲಿ ಮಲಗುವಂತೆ ತಿಳಿಸುತ್ತಾನೆ. ಹಾಗೆಯೇ ನನ್ನ ಖೈದಿಯ ರಕ್ಷಣೆಯನ್ನು ಸರಿಯಾಗಿ ಮಾಡಬೇಕಿದೆ ಎಂದು ತಿಳಿಸುತ್ತಾ ಭಾರತೀಯ ಪೊಲೀಸರ ಸಂಬಳ, ಸಾರಿಗೆ ವಿಷಯವನ್ನು ಕೇಳುತ್ತಾ ಗೊರೂರರಿಗೆ ಈ ಮಾತನ್ನು ಹೇಳುತ್ತಾನೆ. | |
| | ಇಲ್ಲಿ ಅಮೆರಿಕಾದ ಪೊಲೀಸರು ಕಾನೂನನ್ನು ಪಾಲಿಸುತ್ತಿದ್ದ ರೀತಿಯು ವ್ಯಕ್ತವಾಗುತ್ತದೆ. | |
| 32. | "ದೊರಕಿದಾ ಗುರು ದೊರಕಿದಾ ಸದ್ಗುರು" | |
| | ***ಉತ್ತರ :*** | |
| | ಪ್ರಸ್ತುತ ವಾಕ್ಯವನ್ನು ಲೇಖಕರಾದ ಆರ್.ಎಸ್. ಸುಂಕದರವರು ಸಂಪಾದಿಸಿರುವ "ಶ್ರೀ ಶಿಶುನಾಳ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಯಿಂದಾರಿಸಿದ 'ಶಿಶುನಾಳ ಶರೀಫ ಸಾಹೇಬರು' ಗದ್ಯದಿಂದಾರಿಸಿದೆ. | |
| | ಉದಾರ ಹೃದಯಿ ಗೋವಿಂದಭಟ್ಟರು ಮಾನವಕುಲ ಒಂದೇ ಎಂಬ ಭಾವನೆಯುಳ್ಳವರಾಗಿ ಸ್ವಜಾತಿಯವನಲ್ಲದ ತಮ್ಮ ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದಾಗ ಅಸಮ ತೇಜೋರೂಪದಿಂದ ಬಂದ ಗುರುವಿನ ಮಹಿಮೆಯನ್ನು ಕುರಿತು ಭಯಭಕ್ತಿಯಿಂದ ಹಾಡಿದ್ದಾರೆ. | |
| | ಗುರುವಿನ ಮೇಲಿನ ಭಯಭಕ್ತಿ, ಉದಾರತೆ ಹಾಗೂ ಗುರುವಿನ ಮಹಿಮೆಯನ್ನು ಸ್ವಾರಸ್ಯ ಪೂರ್ಣವಾಗಿ ಈ ವಾಕ್ಯದಲ್ಲಿ ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟತೇವ"<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು ಸತೀಶ ಕುಲಕರ್ಣಿ ವಿರಚಿತ 'ಕಟ್ಟತೇವ ನಾವು' ಎಂಬ ಕ್ರಾಂತಿಗೀತೆಯಿಂದ ಆರಿಸಲಾಗಿದೆ.<br>ಸಮಾಜದಲ್ಲಿ ಅಜ್ಞಾನ, ಅನ್ಯಾಯ, ದೌರ್ಜನ್ಯ, ಶೋಷಣೆಗಳಿಂದ ತಾರತಮ್ಯ ಎದ್ದು ತಾಂಡವವಾಡುತ್ತಿದ್ದಾಗ ಜನರಲ್ಲಿ ಸಾಮರಸ್ಯದ ಬದುಕು ಕನಸಾಗಿ ಉಳಿಯುತ್ತದೆ ಮತ್ತು ಅಸಮಾಧಾನದಿಂದ ಮನಸ್ಸುಗಳು ಒಡೆದ ಮನಸ್ಸುಗಳಾಗಿ ಭರವಸೆಯನ್ನು ಕಳೆದುಕೊಳ್ಳುವಂತಾಗುತ್ತದೆ. ಅವರು ಕಂಡ ಕನಸುಗಳನ್ನು ನನಸಾಗುವಂತೆ ಮಾಡುತ್ತೇವೆಂದು ಕ್ರಾಂತಿಕಾರರು ಹೇಳಿದ್ದಾರೆ.<br>ಕ್ರಾಂತಿಕಾರರು ಭರವಸೆಯ ಬೆಳಕನ್ನು ಮೂಡಿಸುವ ಪ್ರಯತ್ನವನ್ನು ಮಾಡಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 34. | "ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರಿ"<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು 'ಪುರಂದರ ಸಾಹಿತ್ಯ ದರ್ಶನ ಸಂಪುಟ–೧' ಕೃತಿಯಲ್ಲಿನ ಪುರಂದರದಾಸರು ರಚಿಸಿರುವ 'ಉದರ ವೈರಾಗ್ಯ' ಕೀರ್ತನೆಯಿಂದ ಆರಿಸಲಾಗಿದೆ.<br>ಪುರಂದರದಾಸರು ಡಾಂಭಿಕಭಕ್ತನ ಆಡಂಬರದ ಭಕ್ತಿಯನ್ನು ವಿಡಂಭಿಸುತ್ತಾರೆ. ಉದರ ಪೋಷಣೆಗೆ ಸೋಗನ್ನು ಧರಿಸಿ, ಬೂಟಾಟಿಕೆ ಮಾಡಿ, ತನಗೆ ಸರಿಸಾಟಿಯಾದ ಭಕ್ತಬೇರಿಲ್ಲವೆಂದು ನಾಟಕಸ್ತ್ರೀಯಂತೆ ನಟಿಸುವುದರ ಮೂಲಕ ಬಯಲು ಡಂಭವನ್ನು ತೋರಿಸುತ್ತಾ ಡಾಂಭಿಕ ಭಕ್ತನು ಬಹಳ ರೀತಿಯಲ್ಲಿ ನಟನೆಯನ್ನು ಮಾಡಿ ಊಟಕ್ಕೆ ಮಾರ್ಗವನ್ನು ಕಂಡುಕೊಳ್ಳುವನೆಂದು ತಿಳಿಸಿದ್ದಾರೆ.<br>ಈ ವಾಕ್ಯದಲ್ಲಿ ಆಡಂಬರದ ಭಕ್ತಿಯ ಮೂಲಕ ಡಾಂಭಿಕ ಭಕ್ತನ ನಟನೆ ಮೋಸಗೊಳಿಸುವ ರೀತಿ ಅಭಿವ್ಯಕ್ತಗೊಳ್ಳುತ್ತದೆ. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಕಂಚುಗಾರನ ...........................................................<br>...........................................................................<br>...........................................................................<br>.................................................................. ಮಾಡುವುದು<br>**ಅಥವಾ** | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಾನು ಎಂಬುದ ……………………………………………<br>………………………………………………………<br>………………………………………………………<br>…………………………………………… ಕಾರ್ಯಗಳೆಲ್ಲವು | |
| | ***ಉತ್ತರ :***<br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು. | |
| | **ಅಥವಾ** | |
| | ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಏನಾದರು ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು. | |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36 | ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ | |
| | ***ಉತ್ತರ :***<br>ಇವರು ೧೯೫೦ ಆಗಸ್ಟ್ ೫ ರಂದು ಬೆಳಗಾವಿಯಲ್ಲಿ ಜನಿಸಿದರು. ಇವರು ಜೀವನ್ಮುಕ್ತಿ, ಚಿಣ್ಣರ ಚಿತ್ತಾರ, ಚಿಣ್ಣರ ಚಿಲಿಪಿಲಿ, ಜೀವನಧಾರೆ, ಸಮಾಜ ವಿಕಾಸಕ್ಕೆ ಶರಣ ಸಂಸ್ಕೃತಿ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ.<br>ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಗೌರವ ಡಾಕ್ಟರೇಟ್ ಪ್ರಶಸ್ತಿ ಲಭಿಸಿದೆ.<br>(ಪ್ರಶಸ್ತಿಗಳ ಹೆಸರನ್ನು ಬರೆಯಬೇಕೆಂದೇನೂ ಇಲ್ಲ) | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 37. | ಸಿ.ಪಿ.ಕೆ.<br>***ಉತ್ತರ :***<br>ಸಿ.ಪಿ.ಕೆ. ಎಂದು ಪ್ರಸಿದ್ಧರಾಗಿರುವ ಸಿ.ಪಿ. ಕೃಷ್ಣಕುಮಾರ್ ೧೯೩೯ ರಲ್ಲಿ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಇವರು ಅನಂತ ಪೃಥ್ವಿ, ಸಾಹಿತ್ಯ ಪ್ರವೇಶ ಕಾವ್ಯಾರಾಧನೆ, ವರ್ತಮಾನ, ತಾರಾಸಖ, ಕನ್ನಡ ವೇಣಿಸಂಹಾರ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಕನ್ನಡ ನಾಗಾನಂದ, ಬೊಗಸೆ, ಅಂತರತಮ, ಜನಪದ ಸರಸ್ವತಿ.<br>ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.<br>(ಪ್ರಶಸ್ತಿಗಳ ಹೆಸರನ್ನು ಬರೆಯಬೇಕೆಂದೇನೂ ಇಲ್ಲ)<br>**ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ವಿವರಿಸಿ.<br>***ಅಥವಾ***<br>ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಕೊಡಗಿನ ಗೌರಮ್ಮ ಗಾಂಧೀಜಿಯವರ ಬಗೆಗೆ ಅಪರಿಮಿತವಾದ ಅಭಿಮಾನವನ್ನು ಬೆಳೆಸಿಕೊಂಡು, ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರ ಆಸಕ್ತಿಯನ್ನು ಹೊಂದಿ ಖಾದಿ ಬಟ್ಟೆಗಳನ್ನು ಧರಿಸಿ, ತಮ್ಮ ಇಪ್ಪತ್ತೊಂದನೇ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದರು ಮತ್ತು ಗಾಂಧೀಜಿಯವರು ತಮ್ಮಂಥ ಸಾಧಾರಣ ಕುಟುಂಬದವರ ಮನೆಗೆ ಬರಬೇಕೆಂದು ಹಠಹಿಡಿದು ಅದನ್ನು ಸಾಕಾರಗೊಳಿಸಿದರು. ೧೯೩೪ ರಲ್ಲಿ ಗಾಂಧೀಜಿ ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಉಪವಾಸ ಮಾಡುತ್ತಿದ್ದ ಕೊಡಗಿನ ಗೌರಮ್ಮನಿಗೆ ಕಿತ್ತಲೆ ಹಣ್ಣು ನೀಡಿ ಉಪವಾಸವನ್ನು ಅಂತ್ಯಗೊಳಿಸಿ, ಗಾಂಧೀಜಿ ಕೊಟ್ಟ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಾತಿನಂತೆ ಅವರ ಮನೆಗೆ ಬಂದರು. ಆಗ ಗೌರಮ್ಮ ತಮ್ಮ ಮಂಗಳಸೂತ್ರ, ಕಿವಿಯೋಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ನಿಧಿಗೆ ಕೊಟ್ಟರು. ಇದನ್ನು ಕಂಡ ಗಾಂಧೀಜಿಯವರು ಅಚ್ಚರಿಗೊಂಡರು. | |
| | **ಅಥವಾ** | |
| | ಕೊಡಗಿನ ಗೌರಮ್ಮನವರು ಸಣ್ಣಕಥೆಗಳ ರಚನೆಯ ಮೂಲಕ ನಾಡಿನ ಜನರಿಗೆ ಪರಿಚಿತರಾಗಿದ್ದರು. ಇವರು 'ಪುನರ್ವಿವಾಹ' ಎಂಬ ಕಥೆಯ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಇವರು ತಮ್ಮ ಸುತ್ತಮುತ್ತಲಿನ ಬದುಕಿನಲ್ಲಿ ಕಂಡುಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾ ಲೋಕದ ಕನಸುಗಳ, ಆದರ್ಶಗಳ ಚಿತ್ರಣವನ್ನು ತಮ್ಮ ಕಥೆಗಳಲ್ಲಿ ತಿಳಿಸಲು ಪ್ರಯತ್ನಿಸಿದ್ದಾರೆ. ಜೊತೆಗೆ ತಾವು ರಚಿಸಿರುವ ಇಪ್ಪತ್ತೊಂದು ಕಥೆಗಳಲ್ಲಿಯೂ ಎಲ್ಲಾ ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜದ ನಿರ್ಮಾಣದ ಶಕ್ತಿಯಿರುವುದು ಪ್ರತಿಬಿಂಬಿತವಾಗಿದೆ. ಇದಲ್ಲದೆ ಕಾರಂತ, ಮಾಸ್ತಿ, ಬೇಂದ್ರೆ ಮುಂತಾದ ಕವಿಗಳ ಆರ್. ಕಲ್ಯಾಣಮ್ಮನವರಂಥಹ ಲೇಖಕಿಯವರ ಸಂಪರ್ಕವೂ ಇತ್ತು. ಜೊತೆಗೆ ಯಕ್ಷಗಾನ, ತಾಳಮದ್ದಲೆ, ಜನಪದ ವಿಚಾರದ ಬಗ್ಗೆ ಇದ್ದ ಆಸಕ್ತಿಯೂ ಸಾಹಿತ್ಯ ಸೃಷ್ಟಿಗೆ ಪೂರಕವಾಗಿದೆ. | |
| 39. | ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆಂದು ಬಸವಣ್ಣನವರು ತಿಳಿಸಿದ್ದಾರೆ ? ವಿವರಿಸಿ. | |
| | ***ಅಥವಾ*** | |
| | ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ಕುರಿತು ವಿವರಿಸಿ. | |
| | ***ಉತ್ತರ :*** | |
| | ಬಸವಣ್ಣನವರು ಅಂತರಂಗ ಮತ್ತು ಬಹಿರಂಗವನ್ನು ಶುದ್ಧವಾಗಿಟ್ಟುಕೊಳ್ಳಲು ಮನುಷ್ಯರು ಇನ್ನೊಬ್ಬರ ವಸ್ತುಗಳನ್ನು ಕದಿಯದೆ, ಇನ್ನೊಬ್ಬರಿಗೆ ಹಿಂಸೆ ನೀಡದೆ, ಸುಳ್ಳನ್ನು ಹೇಳದೇ ಸತ್ಯವನ್ನು ನುಡಿಯುವಂತವನಾಗಬೇಕು. ಇತರರನ್ನು ನಿಂದನೆಗೆ ಗುರಿಪಡಿಸದೇ, ಯಾರು ಸತ್ಕರ್ಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಪರಿಶುದ್ಧವಾದ ಮನಸ್ಸಿನಿಂದ, ಭಕ್ತಿಯಿಂದ ಸ್ಮರಿಸುವರೋ ಅವರು ಆಂತರಿಕವಾಗಿ ಮತ್ತು ಬಹಿರಂಗವಾಗಿ ಶುದ್ಧವಾಗಿರುವರಲ್ಲದೆ ದೈವದ ಕೃಪೆಗೂ ಪಾತ್ರರಾಗುವರು ಎಂದು ತಿಳಿಸಿದ್ದಾರೆ. | |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಸವಣ್ಣನವರು ತಮ್ಮ ವಚನಗಳಲ್ಲಿ ಮಾನವರು ತಮ್ಮ ಬದುಕಿನುದ್ದಕ್ಕೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸುತ್ತಾ ಬದುಕಿನಲ್ಲಿ ಕಳ್ಳತನ ಮಾಡುವುದು, ಸುಳ್ಳನ್ನು ಹೇಳುವುದು, ಕೋಪಿಸಿಕೊಳ್ಳುವುದು, ಬೇರೆಯವರ ಬಗ್ಗೆ ಅಸಹ್ಯಪಡುವುದು, ಇನ್ನೊಬ್ಬರನ್ನು ತೆಗಳುವುದನ್ನು ಮಾಡಬಾರದು. ಸತ್ಯವನ್ನು ನುಡಿವುದೇ ಸ್ವರ್ಗ, ಮಿಥ್ಯವನ್ನು ನುಡಿವುದೇ ನರಕ ಎಂಬುದು ಬಸವಣ್ಣನವರು ನೀಡಿರುವ ಹೊಸ ಸೂತ್ರದಂತೆ ಮನುಷ್ಯನು ಸದಾಚಾರ ಸಂಪನ್ನನಾಗಿರಬೇಕೆಂದು ತಿಳಿಸಿದ್ದಾರೆ. ಅಂತರಂಗ ಮತ್ತು ಬಹಿರಂಗದಲ್ಲಿ ಪರಿಶುದ್ಧತೆ ಹೊಂದಿ ದೇವರನ್ನು ಒಲಿಸಿಕೊಳ್ಳಬಹುದು. ಸತ್ಯವನ್ನು ನುಡಿಯುತ್ತಾ, ಕೋಪಿಸಿಕೊಳ್ಳದೇ ತಾಳ್ಮೆಯಿಂದಿರಬೇಕು. ಅಹಿಂಸಾನಿರತನಾಗಿರಬೇಕೆಂಬ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ಬಸವಣ್ಣನವರು ತಿಳಿಸಿದ್ದಾರೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | ಇವುಗಳಲ್ಲಿ ಅನ್ವರ್ಥಕನಾಮ ಪದವಿದು<br>***ಉತ್ತರ :*** (ಸಿ) ವಿದ್ವಾಂಸ | |
| 41. | 'ಕುಲವೆನ್ನದ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>***ಉತ್ತರ :*** (ಬಿ) ವಕಾರಾಗಮ | |
| 42. | ಕೆಳಗಿನ ಪದಗಳಲ್ಲಿ ತದ್ಭವ ರೂಪವಿದು<br>***ಉತ್ತರ :*** (ಸಿ) ವರುಷ | |
| 43. | 'ವಿದ್ಯಾರ್ಥಿಗಳು ಶಾಲೆಗೆ ಶಿಸ್ತಿನಿಂದ ಬರುತ್ತಿದ್ದಾರೆ.' ಎಂಬ ವಾಕ್ಯವು ಈ ಕಾಲರೂಪದಲ್ಲಿದೆ.<br>***ಉತ್ತರ :*** (ಎ) ವರ್ತಮಾನಕಾಲ | |
| 44. | 'ಹೃದಯವು ಕಮಲದಂತೆ ಅರಳಿತು' — ಈ ವಾಕ್ಯದಲ್ಲಿರುವ ಉಪಮಾನ<br>***ಉತ್ತರ :*** (ಬಿ) ಕಮಲ | |
| 45. | 'ಕಚೇರಿ' — ಪದವು ಈ ಭಾಷೆಗೆ ಸೇರಿದೆ<br>***ಉತ್ತರ :*** (ಬಿ) ಹಿಂದೂಸ್ಥಾನಿ | |
| 46. | 'ಸಂಬಂಧದಲ್ಲಿ' — ಪದದಲ್ಲಿರುವ ವಿಭಕ್ತಿ ಪ್ರತ್ಯಯ<br>***ಉತ್ತರ :*** (ಡಿ) ಅಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | 'ಕಪ್ಪಕಾಣಿಕೆ' — ಪದದ ವ್ಯಾಕರಣಾಂಶ<br>***ಉತ್ತರ :*** (ಸಿ) ಜೋಡುನುಡಿ | |
| 48. | 'ಕೆರೆಕಟ್ಟೆ ಬಾವಿಗಳು' — ಪದವು ಈ ಸಮಾಸಕ್ಕೆ ಸೇರಿದೆ<br>***ಉತ್ತರ :*** (ಬಿ) ದ್ವಂದ್ವ | |
| 49. | 'ಕುವೆಂಪುರವರ ಭಾವಗೀತೆಗಳನ್ನು ಕೇಳಿ ವಿದ್ಯಾರ್ಥಿಗಳು ಮೈಮರೆತರು' — ಈ ವಾಕ್ಯವು<br>***ಉತ್ತರ :*** (ಸಿ) ಮಿಶ್ರ ವಾಕ್ಯ | |
| 50. | ಸತ್ಯಕ್ಕಾಗಿ ಆಗ್ರಹಿಸುವುದೇ 'ಸತ್ಯಾಗ್ರಹ' ಎಂಬ ಅರ್ಥವನ್ನು ನೀಡುತ್ತದೆ — ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ<br>***ಉತ್ತರ :*** (ಬಿ) ವಾಕ್ಯವೇಷ್ಟನ | |
| 51. | 'ಘನದೊಳ್' — ಈ ಪದಕ್ಕೆ ಪ್ರಸ್ತಾರ ಹಾಕಿದಾಗ ಹೀಗಾಗುತ್ತದೆ<br>***ಉತ್ತರ :*** (ಎ) U U — | |
| | **ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)**<br>**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)<br>ಭಾಂವ್ರಿದೇವಿಯು ರಾಜಸ್ಥಾನದ ಒಂದು ಬಡ ಕುಟುಂಬದಲ್ಲಿ ಜನಿಸಿದಳು. ಇವಳು ಮನೆಗೆಲಸ ಮತ್ತು ಪ್ರತಿನಿತ್ಯ ಕತ್ತೆಗಳನ್ನು ಬಯಲಿನಲ್ಲಿ ಮೇಯಿಸುವ ಕೆಲಸವನ್ನು ಮಾಡಿಕೊಂಡಿದ್ದಳು. ಇವಳಿಗೆ ತಂದೆ–ತಾಯಿ ಚಿಕ್ಕ ವಯಸ್ಸಿನಲ್ಲಿ ಮೋಹನ್‌ಲಾಲ್ ಎಂಬ ಹುಡುಗನೊಂದಿಗೆ ವಿವಾಹವನ್ನು ಮಾಡಿದರು. ಇವಳು ಬಡತನದ ಕಷ್ಟ ಮತ್ತು ಚಿಕ್ಕ ವಯಸ್ಸಿನಲ್ಲೇ ತಾಯ್ತನದಿಂದಾಗುವ ಪರಿಣಾಮಗಳನ್ನರಿತಿದ್ದಳು. ಈಕೆ ತನ್ನ ಮಗಳಿಗೆ ಬಾಲ್ಯವಿವಾಹವನ್ನು ಮಾಡುವುದನ್ನು ವಿರೋಧಿಸಿದಳು. ಧೃತಿಗೆಡದ ಈಕೆ ಊರಿನ ಹೆಂಗಸರಿಗೆ ಇದರ ಸಾಧಕ–ಭಾದಕಗಳನ್ನು ಕುರಿತು ತಿಳಿಸಿ, ಅವರಲ್ಲಿ ಜಾಗೃತಿಯನ್ನು ಮೂಡಿಸಿದಳು. ಇವಳ ಸಮಾಜಸೇವೆಗಾಗಿ 'ನೀರ್ಜಾಭನೋಟ್' ಪ್ರಶಸ್ತಿ ನೀಡಲಾಗಿದೆ. ಇದರಿಂದ ಬಂದ ಒಂದು ಲಕ್ಷ ರೂಪಾಯಿ ಮೊತ್ತದ ಹಣವನ್ನು ಹಳ್ಳಿಯಲ್ಲಿರುವ ಹೆಣ್ಣು ಮಕ್ಕಳ ಶಾಲೆಗೆ ಶೌಚಾಲಯ ನಿರ್ಮಾಣ ಮಾಡಲು ನೀಡಿದಳು. | $4 \times 1 = 4$ |
| 52. | ಪ್ರತಿನಿತ್ಯ ಭಾಂವ್ರಿದೇವಿ ಮಾಡುತ್ತಿದ್ದ ಕೆಲಸಗಳೇನು ?<br>***ಉತ್ತರ :***<br>ಭಾಂವ್ರಿದೇವಿಯು ಪ್ರತಿನಿತ್ಯ ಮನೆಗೆಲಸ ಮತ್ತು ಕತ್ತೆಗಳನ್ನು ಬಯಲಿನಲ್ಲಿ ಮೇಯಿಸುವ ಕೆಲಸವನ್ನು ಮಾಡುತ್ತಿದ್ದಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಭಾಂವ್ರಿದೇವಿಯ ಅರಿವಿಗೆ ಬಂದ ವಿಚಾರಗಳೇನು ? | |
| | ***ಉತ್ತರ :*** | |
| | ಬಡತನದ ಕಷ್ಟ ಮತ್ತು ಚಿಕ್ಕ ವಯಸ್ಸಿನಲ್ಲಿ ತಾಯ್ತನದಿಂದಾಗುವ ದುಷ್ಪರಿಣಾಮಗಳು ಭಾಂವ್ರಿದೇವಿಯ ಅರಿವಿಗೆ ಬಂದ ವಿಚಾರಗಳಾಗಿವೆ. | |
| 54. | ಭಾಂವ್ರಿದೇವಿಗೆ ನೀಡಿದ ಪ್ರಶಸ್ತಿ ಯಾವುದು ? | |
| | ***ಉತ್ತರ :*** | |
| | ಭಾಂವ್ರಿದೇವಿಗೆ ಸಮಾಜ ಸೇವೆಗಾಗಿ 'ನೀರ್ಜಾಭನೋಟ್' ಪ್ರಶಸ್ತಿ ನೀಡಲಾಗಿತ್ತು. | |
| 55. | ಭಾಂವ್ರಿದೇವಿಯು ತನಗೆ ಬಂದ ಪ್ರಶಸ್ತಿಯ ಹಣವನ್ನು ಯಾವ ಕಾರ್ಯಕ್ಕೆ ನೀಡಿದಳು ? | |
| | ***ಉತ್ತರ :*** | |
| | ಭಾಂವ್ರಿದೇವಿಯು ತನಗೆ ಬಂದ ಪ್ರಶಸ್ತಿಯ ಹಣವನ್ನು ಹಳ್ಳಿಗಳಲ್ಲಿರುವ ಹೆಣ್ಣು ಮಕ್ಕಳ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಬಳಸಲು ನೀಡಿದಳು. | |
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 3 = 3$ |
| | * ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ | |
| | * ಮಾಡಿದ್ದುಣ್ಣೋ ಮಹರಾಯ | |
| | * ಉಪ್ಪು ತಿಂದವನು ನೀರು ಕುಡಿಯಲೇಬೇಕು | |
| | ***ಉತ್ತರ :*** | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವಿಕ್ರಮ್ / ಅಕ್ಷತಾ' ಎಂದು ಭಾವಿಸಿಕೊಂಡು, ಮೈಸೂರಿನಲ್ಲಿರುವ ನಿಮ್ಮ ತಾಯಿಯವರಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ ಕಾರ್ಯಕ್ರಮ'ವನ್ನು ಕುರಿತು ಪತ್ರವೊಂದನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು 'ಕಿರಣ್ / ಸನಿಶಾ' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಹಾಳಾಗಿರುವ ರಸ್ತೆಗಳ ಗುಂಡಿಗಳನ್ನು ಮುಚ್ಚುವಂತೆ ಕೋರಿ ನಗರಸಭಾ ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | |
| | ∗ ಅರಣ್ಯಗಳು ಮತ್ತು ಅವುಗಳಿಂದಾಗುವ ಉಪಯೋಗಗಳು | |
| | ∗ ಸಂಪರ್ಕ ಮಾಧ್ಯಮಗಳು ಮತ್ತು ಅವುಗಳ ಪ್ರಯೋಜನಗಳು | |
| | ∗ ಜ್ಞಾನ ಸಂಪಾದನೆಯಲ್ಲಿ ಗ್ರಂಥಾಲಯಗಳ ಪಾತ್ರ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |